# ಕರ್ನಾಟಕ ಲೋಕಾಯುಕ್ತ

ಸಂಖ್ಯೆ:ಕಂಪ್ಲೆಂಟ್/ಉಪಲೋಕ್/ಬಿಡಿ–2409/2015/ಡಿ.ಆರ್.ಇ–2

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 09/05/2022

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ ರಂಗಸ್ವಾಮಿ, ಗುಮಾಸ್ತರು, ತೋಟಗಾರಿಕೆ ಇಲಾಖೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ, (2) ಶ್ರೀ ರವಿಕುಮಾರ್.ಡಿ ಬಿನ್ ದೊಡ್ಡಯ್ಯ, ಗ್ರಾಮ ಲೆಕ್ಕಾಧಿಕಾರಿ, ಶಂಬೋನಹಳ್ಳಿ, ಕೋರ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ರವರುಗಳು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

ಶ್ರೀ ಎಸ್.ಟಿ.ಗಿರಿಯಪ್ಪ ಬಿನ್ ಸಣ್ಣ ತಿಮ್ಮಯ್ಯ, ಸಿಂಗದಹಳ್ಳಿ, ಬರಸಿದ್ದಲಹಳ್ಳಿ ಅಂಚೆ, ಕಂದಿಕೆರೆ ಹೋಬಳಿ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, (1) ಶ್ರೀಮತಿ ಮಹಾಲಕ್ಷ್ಮಮ್ಮ, ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ತೋಟಗಾರಿಕೆ ಇಲಾಖೆ, ತುಮಕೂರು ಜಿಲ್ಲೆ, (2) ಶ್ರೀ ರಂಗಸ್ವಾಮಿ, ಗುಮಾಸ್ತರು, ತೋಟಗಾರಿಕೆ ಇಲಾಖೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ, (3) ಶ್ರೀ ರವಿಕುಮಾರ್.ಡಿ ಬಿನ್ ದೊಡ್ಡಯ್ಯ, ಗ್ರಾಮ ಲೆಕ್ಕಾಧಿಕಾರಿ, ಶಂಬೋನಹಳ್ಳಿ, ಕೋರ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ, (4) ಶ್ರೀ ಕೃಷ್ಣಪ್ಪ.ವಿ ಬಿನ್ ವೆಂಕಟಪ್ಪ, ಕಂದಾಯ ಅಧಿಕಾರಿ, ಕಂದಿಕೆ ಹೋಬಳಿ, ಸಿ.ಎನ್.ಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು (5) ಶ್ರೀಮತಿ ಸುಮತಿ.ಬಿ.ಸಿ., ಉಪ ತಹಶೀಲ್ದಾರ್, ಗೂಳೂರು ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ

'1 ರಿಂದ 5ನೇ ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಿ.ಎನ್.ಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟಂತೆ ಭೀಕರ ಬರಗಾಲದಿಂದ ತೆಂಗು ಬೆಳೆ ನಾಶವಾಗಿ ಸರ್ಕಾರ ತೆಂಗು ಪುನಶ್ಚೇತನ ಯೋಜನೆಯಡಿ 80 ಲಕ್ಷ ಅನುದಾನ ನೀಡಿದ್ದು, ಸದರಿ ಕಾಮಗಾರಿಗಳಲ್ಲಿ ಲಂಚ ನೀಡಿದ ಬಗ್ಗೆ ಮತ್ತು ಕಾಮಗಾರಿ ಪೂರ್ಣಗೊಳಿಸದವರಿಗೆ ಎದುರುದಾರರು ಹಣ ಮಂಜೂರು ಮಾಡಿರುತ್ತಾರೆ. ಬಡ ರೈತರು, ಪರಿಶಿಷ್ಟ ಜಾತಿ/ವರ್ಗದ ಜನರು ಅರ್ಜಿ ನೀಡಿದ್ದು, ಸೌಲಭ್ಯಕ್ಕೆ ಅರ್ಹರಿದ್ದರೂ ಸಹ ಸದರಿಯವರಿಗೆ ಸೌಲಭ್ಯ ನೀಡಿರುವುದಿಲ್ಲ. ಕಾರಣ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಲು ಕೋರಿರುತ್ತಾರೆ.

3. 1 ಮತ್ತು 2ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ, ದೂರಿನಲ್ಲಿ ಹೇಳಿರುವ ಎಲ್ಲಾ ಆಪಾದನೆಗಳನ್ನು ಸ್ಪಷ್ಟವಾಗಿ ನಿರಾಕರಿಸಿ, ಸದರಿ ಯೋಜನೆಯಡಿ ಸ್ಥಳ ಪರಿಶೀಲನೆ ಮಾಡಿ ಕಾಮಗಾರಿ ಪೂರ್ಣಗೊಂಡ ನಂತರ ಫಲಾನುಭವಿಗಳ ಖಾತೆಗೆ ಹಣ ಜಮಾ ಮಾಡಲಾಗಿರುತ್ತದೆ. ಕಾಮಗಾರಿ ಪೂರ್ಣಗೊಳಿಸದೆ ಸಹಾಯಧನ ನೀಡಿರುವುದಿಲ್ಲ. ಪರಿಶಿಷ್ಟ ಜಾತಿ/ವರ್ಗದ ಜನರಿಗೆ ಸಂಬಂಧಪಟ್ಟ ಯಾವುದೇ ಅರ್ಜಿಗಳನ್ನು ವಜಾ ಮಾಡಿರುವುದಿಲ್ಲ. 2013-14 ಮತ್ತು 2014-15ನೇ ಸಾಲಿನ ಪ್ರಕೃತಿ ವಿಕೋಪ ಯೋಜನೆಯಡಿ ಬೆಳೆ ಹಾನಿಯಾಗಿರುವ ಬಗ್ಗೆ ಪರಿಹಾರ ನೀಡಲು ಸರ್ಕಾರದಿಂದ ಹಣ ಬಿಡುಗಡೆಯಾಗಿರುವುದಿಲ್ಲ. ಎಲ್ಲ ಕಾಮಗಾರಿಗಳಿಗೂ ಮುಕ್ತಾಯವಾದ ನಂತರ ಫಲಾನುಭವಿಗಳ ಖಾತೆಗೆ ಆರ್.ಟಿ.ಜಿ.ಎಸ್.ಮೂಲಕ ಹಣ ಜಮಾ ಮಾಡಲಾಗಿರುತ್ತದೆ. ಇದರಿಂದ ಯಾವುದೇ ಹಣ ದುರುಪಯೋಗವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

4. ಗೌರವಾನ್ವಿತರ ಆದೇಶದಂತೆ, ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು ರವರಿಗೆ ಸದರಿ ಪ್ರಕರಣದ ಕುರಿತು ತನಿಖೆ ಕೈಗೊಂಡು ವಿವರವಾದ ವರದಿಯನ್ನು ಸಲ್ಲಿಸಲು

ತಿಳಿಸಲಾಗಿತ್ತು. ಅದರಂತೆ, ಶ್ರೀ.ಕೆ.ಸುರೇಶ, ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು ರವರು ದಿ:20-06-2017 ರಂದು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯಲ್ಲಿ, ದೂರಿನಲ್ಲಿ ಆರೋಪಿಸಿರುವ ಆರೋಪಗಳಾದ

1) ತೆಂಗು ಮನಶ್ಚೇತನ ಯೋಜನೆ ಅಡಿಯಲ್ಲಿ ಲಂಚದ ಹಣ ಕೊಟ್ಟವರಿಗೆ ಕಾಮಗಾರಿ ಮೂರ್ಣಗೊಳಿಸದವರಿಗೆ ಪರಿಹಾರ ಮಂಜೂರು ಮಾಡಿರುತ್ತಾರೆ ಎಂಬ ಆಪಾದನೆಗಳಿಗೆ ಯಾವುದೇ ಸಾಕ್ಷ್ಯ ದೊರಕಿರುವುದಿಲ್ಲ.

2) ಟ್ರ್ಯಾಕ್ಟರ್ ಖರೀದಿಯ ಸಹಾಯಧನವನ್ನು ಲಂಚದ ಹಣ ಕೊಟ್ಟವರಿಗೆ ಮಂಜೂರು ಮಾಡಿರುತ್ತಾರೆ ಎಂಬ ಆಪಾದನೆಯ ಬಗ್ಗೆ ವಿಚಾರಣೆ ಮಾಡಲಾಗಿ ಸಾಕ್ಷಿದಾರರಾದ ಶ್ರೀ.ಗಂಗಾಧರಮೂರ್ತಿ, ರಾಮಚಂದ್ರಯ್ಯ ಮತ್ತು ಎಸ್.ಜಿ.ರಂಗಯ್ಯ ರವರ ಮಗ ಚಿಕ್ಕಣ್ಣ ರವರ ಹೇಳಿಕೆಗಳಿಂದ ಆರೋಪ ಸುಳ್ಳಾಗಿರುವುದು ಕಂಡುಬರುತ್ತದೆ.

3) 2013-14 ಮತ್ತು 2014-15ನೇ ಸಾಲಿನಲ್ಲಿ ಪ್ರಕೃತಿ ವಿಕೋಪದಿಂದ ಬೆಳೆ ಹಾನಿ ಆಗಿರುವ ಕುರಿತು ಸರ್ಕಾರವು ಪರಿಹಾರದ ಹಣ 80 ಲಕ್ಷ ರೂ.ಗಳನ್ನು 1ನೇ ಎದುರುದಾರರಾದ ಶ್ರೀಮತಿ.ಮಹಾಲಕ್ಷ್ಮಮ್ಮ ರವರು ಅವರ ಸ್ವಂತಕ್ಕೆ ಬಳಸಿಕೊಂಡಿರುತ್ತಾರೆ ಎಂಬ ಆರೋಪದ ಬಗ್ಗೆ ಯಾವುದೇ ಸಾಕ್ಷ್ಯಮರಾವೆಗಳು, ದಾಖಲಾತಿಗಳು ಲಭ್ಯವಿರುವುದಿಲ್ಲ.

4) ತೋಟಗಾರಿಕೆಯಿಂದ ನೀಡುತ್ತಿರುವ ಸಹಾಯಧನ ಮತ್ತು ಸೌಲಭ್ಯಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಆರ್‌ಟಿಜಿಎಸ್ ಮುಖಾಂತರ ವರ್ಗಾಯಿಸಿರುವುದು ತನಿಖೆಯಲ್ಲಿ ಕಂಡುಬರುತ್ತದೆ.

5) ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ರಲ್ಲಿ 4 ಎಕರೆ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯದಿದ್ದರೂ 2015-16ನೇ ಸಾಲಿನಲ್ಲಿ ಆರ್.ಕೆ.ವಿ.ವೈ. ಯೋಜನೆ ಅಡಿ ಶ್ರೀಮತಿ.ರಂಗಮ್ಮ ಕೋಂ ಲೇಟ್ ರಂಗಯ್ಯ ರವರಿಗೆ 6,400/-ರೂ. ಬೆಳೆ ಪರಿಹಾರವನ್ನು ಎದುರುದಾರರು ಮಂಜೂರು ಮಾಡಿರುತ್ತಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಮಾಡಲಾಗಿ, ಅರ್ಜಿದಾರರಾದ ಶ್ರೀಮತಿ.ರಂಗಮ್ಮ ಕೋಂ ರಂಗಯ್ಯ ರವರ ಹೆಸರಿನಲ್ಲಿ ದೂರುದಾರರಾದ ಎಸ್.ಟಿ.ಗಿರಿಯಪ್ಪ ಹಾಗೂ ಶ್ರೀಮತಿ.ರಂಗಮ್ಮ ರವರ ಮೊಮ್ಮಗನಾದ ರಂಜನಕುಮಾರ್ ಹಾಗೂ ಆತನ ತಂದೆ ಪುಟ್ಟರಂಗಯ್ಯ ರವರು ಸೇರಿಕೊಂಡು ತೀರ್ಥಮರ ಗ್ರಾಮದ ಸ.ನಂ.36ರ

ಜಮೀನಿನಲ್ಲಿರುವ ತೆಂಗಿನ ಮರಗಳನ್ನು ತೋರಿಸಿ, ಫೋಟೋ ತೆಗೆಯಿಸಿ, ಕಂದಾಯ ಅಧಿಕಾರಿಗಳಿಂದ ಪಡೆದುಕೊಂಡಿರುವ ಬೆಳೆ ದೃಢೀಕರಣ ಪತ್ರ ಪಡೆದುಕೊಂಡು 6,400/-ರೂ.ಗಳ ಬೆಳೆ ಪರಿಹಾರದ ಧನವನ್ನು ಎದುರುದಾರರು ಶ್ರೀಮತಿ.ರಂಗಮ್ಮ ಕೋಂ ರಂಗಯ್ಯ ರವರ ಖಾತೆಗೆ ಜಮಾ ಮಾಡುವ ಮೂಲಕ ಕರ್ತವ್ಯಲೋಪ ಎಸಗಿ, ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು ತನಿಖೆಯಿಂದ ದೃಢಪಟ್ಟಿರುತ್ತದೆ ಎಂಬುದಾಗಿ ವರದಿಯನ್ನು ಸಲ್ಲಿಸಿರುತ್ತಾರೆ.

6) ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ರಲ್ಲಿ 4 ಎಕರೆ ಜಮೀನಿಗೆ ಸಂಬಂಧಿಸಿದಂತೆ ಅರ್ಜಿದಾರರಾದ ಶ್ರೀಮತಿ.ರಂಗಮ್ಮ ಕೋಂ ರಂಗಯ್ಯ ರವರ ಹೆಸರಿನಲ್ಲಿ ಬೆಳೆ ಪರಿಹಾರ ಹಣ ಪಡೆಯಲು ದೂರುದಾರರಾದ ಎಸ್.ಟಿ.ಗಿರಿಯಪ್ಪ ಹಾಗೂ ಆಕೆಯ ಮೊಮ್ಮಗ ರಂಜನಕುಕಮಾರ್ ರವರು ಸುಳ್ಳು ಅರ್ಜಿ ನೀಡಿ, ಅದರ ಆಧಾರದ ಮೇಲೆ ಗ್ರಾಮ ಲೆಕ್ಕಾಧಿಕಾರಿ ರವಿಕುಮಾರ್ ರವರು ಸ್ಥಳ ಪರಿಶೀಲನೆಗೆ ಬಂದಾಗ ತೀರ್ಥಪುರ ಗ್ರಾಮದ ಸ.ನಂ.36ರಲ್ಲಿರುವ ತೆಂಗು ಬೆಳೆಯನ್ನು ತೋರಿಸಿ ತೆಂಗು ಬೆಳೆ ಇರುವುದಾಗಿ ದೃಢೀಕರಣ ಪತ್ರ ಪಡೆದುಕೊಳ್ಳುವ ಸಲುವಾಗಿ ತಪ್ಪು ಮಾಹಿತಿ ನೀಡಿದ್ದು ಹಾಗೂ ಗ್ರಾಮ ಲೆಕ್ಕಾಧಿಕಾರಿಗಳು ಸ್ಥಳವನ್ನು ಸರಿಯಾಗಿ ಪರಿಶೀಲಿಸದೆ ಹಾಗೂ ತೀರ್ಥಪುರ ಹಾಗೂ ಹಾರೋಗೊಂಡನಹಳ್ಳಿ ನಡುವೆ 6 ಕಿ.ಮೀ. ಅಂತರವಿದ್ದರೂ ಸಹಾ, ಸರಿಯಾಗಿ ಸ್ಥಳ ಪರಿಶೀಲಿಸದೆ ಸದರಿ ಸರ್ವೆ ನಂಬರ್‌ನ ಕುರಿತು ಅಕ್ಕಪಕ್ಕದವರನ್ನು ವಿಚಾರಿಸಿ, ಚಕ್‌ಬಂದು ಹಾಗೂ ಇತರೆ ಮಾಹಿತಿಗಳನ್ನು ಪಡೆದುಕೊಳ್ಳದೆ ಬೆಳೆ ದೃಢೀಕರಣ ಪತ್ರಕ್ಕಾಗಿ ಕಂದಾಯ ಅಧಿಕಾರಿಗಳಿಗೆ ಶಿಫಾರಸ್ಸು ಮಾಡಿರುತ್ತಾರೆ. ಅದರ ಆಧಾರದ ಮೇಲೆ ಉಪತಹಶೀಲ್ದಾರ್ ರವರು ಬೆಳೆ ದೃಢೀಕರಣ ಪತ್ರ ನೀಡಿರುತ್ತಾರೆ. ಅದರ ಆಧಾರದ ಮೇಲೆ 1 ಮತ್ತು 2ನೇ ಎದುರುದಾರರು ಬೆಳೆ ಪರಿಹಾರಕ್ಕೆ ಮಂಜೂರು ಮಾಡಿದ್ದು, ಅದರಂತೆ 6,400/-ರೂ. ಆರ್.ಟಿ.ಜಿ.ಎಸ್. ಮುಖಾಂತರ ರಂಗಮ್ಮ ರವರ ಬ್ಯಾಂಕ್ ಖಾತೆಗೆ ಜಮಾ ಮಾಡಿರುತ್ತಾರೆ. ಹೀಗಾಗಿ ಎದುರುದಾರರು ಹಾಗೂ ಬೆಳೆ ದೃಢೀಕರಣ ಪತ್ರ ಪಡೆದುಕೊಳ್ಳಲು ಸುಳ್ಳು ಮಾಹಿತಿ ನೀಡಿರುವ ದೂರುದಾರರು ಹಾಗೂ ಇತರರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ತನಿಖಾ ವರದಿಯಲ್ಲಿ ಅಭಿಪ್ರಾಯಪಟ್ಟಿರುತ್ತಾರೆ.

5. ಶ್ರೀ.ವಿ.ರವಿಕುಮಾರ್, ಗ್ರಾಮ ಲೆಕ್ಕಾಧಿಕಾರಿಗಳು, ಶ್ರೀ.ವಿ.ಕೃಷ್ಣಪ್ಪ, ಕಂದಾಯ ನಿರೀಕ್ಷಕರು, ಶ್ರೀಮತಿ.ಬಿ.ಸಿ.ಸುಮತಿ, ಉಪತಹಶೀಲ್ದಾರ್ ರವರುಗಳನ್ನು 3 ರಿಂದ 5ನೇ

ಎದುರುದಾರರನ್ನಾಗಿ ಸೇರ್ಪಡೆ ಮಾಡಿಕೊಂಡು, ತನಿಖಾ ವರದಿಯ ಮೇಲೆ 1 ರಿಂದ 5ನೇ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿತ್ತು.

6. 1 ಮತ್ತು 2ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ, 2015-16ನೇ ಸಾಲಿನ ಆರ್.ಕೆ.ವಿ.ವೈ. ಯೋಜನೆ ಅಡಿಯಲ್ಲಿ ಫಲಾನುಭವಿಯಾದ ಶ್ರೀಮತಿ.ರಂಗಮ್ಮ ಕೋಂ ಲೇಟ್ ರಂಗಯ್ಯ ರವರಿಗೆ ಬೆಳೆ ಪರಿಹಾರ ಕೋರಿ ಸಲ್ಲಿಸಿರುವ ಅರ್ಜಿಯ ಜೊತೆಯ ದಾಖಲಾತಿಗಳಾದ ಸ.ನಂ.18/ಪಿ ಆರ್‌ಟಿಸಿ, ಬೆಳೆ ದೃಢೀಕರಣ ಪತ್ರ, ಕ್ಷೇತ್ರಾಧಿಕಾರಿಗಳು ತೆಗೆದು ಹಾಜರುಪಡಿಸಿರುವ ಸ್ಥಳದ ಫೋಟೋ ಹಾಗೂ ಇತರೆ ದಾಖಲಾತಿಗಳನ್ನು ಪರಿಶೀಲಿಸಿ, ಸರ್ಕಾರದ ಮಾರ್ಗಸೂಚಿಯ ಪ್ರಕಾರ 6,400/-ರೂ.ಗಳನ್ನು ಫಲಾನುಭವಿಯಾದ ಶ್ರೀಮತಿ.ರಂಗಮ್ಮ ರವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗಿದೆ. ಸರ್ಕಾರಕ್ಕೆ ವಂಚಿಸುವ ಯಾವುದೇ ಉದ್ದೇಶವಿರುವುದಿಲ್ಲ. ಆದ್ದರಿಂದ, ಪ್ರಕರಣದಿಂದ ತಮ್ಮನ್ನು ಕೈಬಿಡಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ.

7. 3ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ, ದೂರಿನಲ್ಲಿ ಆರೋಪಿಸಿರುವ ಆರೋಪ ಹಾಗೂ ತನಿಖಾಧಿಕಾರಿಗಳ ವರದಿಯ ಮೇಲೆ ಸಲ್ಲಿಸುವ ಆಕ್ಷೇಪಣೆ ಏನೆಂದರೆ, ದಿನಾಂಕ:17-01-2016 ರಂದು ಕಂದಿಕೆರೆ ಹೋಬಳಿ ಕಂದಾಯ ನಿರೀಕ್ಷಕರ ಕಚೇರಿಯಿಂದ ಟಪಾಲು ಮುಖಾಂತರ ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ಶ್ರೀಮತಿ.ರಂಗಮ್ಮ ಕೋಂ ರಂಗಯ್ಯ ರವರ ಹೆಸರಿನಲ್ಲಿರುವ ಪಹಣಿ ಪ್ರತಿ, ಆಧಾರ್ ಕಾರ್ಡ್ ಹಾಗೂ ಬೆಳೆ ದೃಢೀಕರಣ ಕೋರಿ ಸಲ್ಲಿಸಿರುವ ಅರ್ಜಿಯನ್ನು ಸ್ವೀಕರಿಸಿರುತ್ತೇನೆ. ದಿನಾಂಕ:18-01-2016 ರಂದು ಹಾರೋಗೊಂಡನಹಳ್ಳಿಗೆ ಹೋಗಿ ಅರ್ಜಿದಾರರ ಬಗ್ಗೆ ವಿಚಾರಿಸಿದಾಗ, ಅರ್ಜಿದಾರರ ಮೊಮ್ಮಗನಾದ ರಂಜನಕುಮಾರ್ ಬಿನ್ ಆರ್.ಕುಮಾರ್ ರವರನ್ನು ವಿಚಾರಿಸಲಾಗಿ, ನಮ್ಮ ಅಜ್ಜಿಗೆ ವಯಸ್ಸಾಗಿದೆ ನಾನೇ ಜಮೀನನ್ನು ತೋರಿಸುತ್ತೇನೆ ಎಂದು ಹೇಳಿ ಆತನು ನನ್ನನ್ನು ಕರೆದುಕೊಂಡು ಹೋಗಿ ತೆಂಗು ಬೆಳೆ ಇರುವ ಜಮೀನ್ನು ತೋರಿಸಿ ಇದೇ ಸ.ನಂ.18/ಪಿ ಎಂದು ಹೇಳಿರುತ್ತಾರೆ. ಸದರಿ ಜಮೀನಿನ ಅಕ್ಕಪಕ್ಕದ ಜಮೀನುದಾರರು ದೊರೆಯದ ಕಾರಣ ವಿಚಾರಿಸಲು ಸಾಧ್ಯವಾಗಿರಲಿಲ್ಲ ಹಾಗೂ ಸದರಿ ಜಮೀನು ಬಗರ್‌ಹುಕ್ಕುಂ ಜಮೀನು ಆಗಿದ್ದು, ಆಕಾರ್ ಬಂದ್ ದುರಸ್ತ್ ಆಗದ ಕಾರಣ ಹಾಗೂ ಗ್ರಾಮ ಸಹಾಯಕರು ಆ ದಿವಸ ಇಲ್ಲದ ಕಾರಣ, ಚೆಕ್‌ಬಂದ್ ಪರಿಶೀಲಿಸಲು ಸಾಧ್ಯವಾಗಿರುವುದಿಲ್ಲ ಹಾಗೂ

2016ರಲ್ಲಿ ದಿಶಾಂಕ್ ಆಪ್, ಬೆಳೆ ಸಮೀಕ್ಷೆ ಆಪ್ ಲಭ್ಯವಿರಲಿಲ್ಲ. ಸದರಿ ಅರ್ಜಿಯು ಸಕಾಲ ಯೋಜನೆ ಅಡಿಯಲ್ಲಿ ಬಂದಿರುವುದರಿಂದ, 2 ದಿನಗಳ ಅವಧಿಯಲ್ಲಿ ವರದಿ ಸಲ್ಲಿಸಬೇಕಾಗಿರುವ ಕಾರಣ ಆಕೆಯ ಮೊಮ್ಮಗ ರಂಜನ್ ಕುಮಾರ್ ತೋರಿಸಿದ ಜಮೀನನ್ನು ಸರಿಯಾಗಿದೆ ಎಂದು ಬೆಳೆ ದೃಢೀಕರಣ ಪತ್ರ ನೀಡಲು ಕೋರಿದೆ ಎಂಬ ಷರಾ ಬರೆದು ಸಹಿ ಮಾಡಿ ಮುಂದಿನ ಕ್ರಮಕ್ಕಾಗಿ ಕಂದಾಯ ಅಧಿಕಾರಿಗಳಿಗೆ ಖುದ್ದಾಗಿ ನೀಡಿರುತ್ತೇನೆ. ನಂತರ ತನಿಖಾಧಿಕಾರಿಗಳು ತನಿಖೆ ಮಾಡಿದ ನಂತರ ಸ.ನಂ.18/ಪಿರಲ್ಲಿ ಯಾವುದೇ ತೆಂಗು ಬೆಳೆ ಇರುವುದಿಲ್ಲ ಎಂದು ತಿಳಿದು ಬಂದಿರುತ್ತದೆ. ದೂರುದಾರರು ದೂರಿನಲ್ಲಿ ಆರೋಪಿಸಿರುವ ಆರೋಪಗಳಿಗೂ ನನಗೂ ಯಾವುದೇ ಸಂಬಂಧವಿರುವುದಿಲ್ಲ. ಶ್ರೀಮತಿ.ರಂಗಮ್ಮ ರವರ ಮೊಮ್ಮಗ ರಂಜನ ಕುಮಾರ್ ರವರು ಜಮೀನನ್ನು ತೋರಿಸಿ ತಪ್ಪು ಮಾಹಿತಿ ನೀಡಿದ ಕಾರಣ, ಬೆಳೆ ದೃಢೀಕರಣ ಪತ್ರ ನೀಡಬೇಕೆಂದು ವರದಿ ನೀಡಿರುತ್ತೇನೆ. ಆದ್ದರಿಂದ, ತನ್ನನ್ನು ಸದರಿ ಪ್ರಕಣದಲ್ಲಿ ಆರೋಪ ಮುಕ್ತಾಗೊಳಿಸಬೇಕೆಂದು ಕೋರಿರುತ್ತಾರೆ.

8. 4ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ, ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿರಲ್ಲಿ ತೆಂಗು ಬೆಳೆ ಇದೆ ಎಂದು ಶ್ರೀಮತಿ.ರಂಗಮ್ಮ ಕೋಂ ಲೇಟ್ ರಂಗಯ್ಯ ರವರಿಗೆ ದೃಢೀಕರಣ ಪತ್ರ ನೀಡಲು ಸಕಾಲ ಯೋಜನೆ ಅಡಿ ಚೆಕ್‌ಲಿಸ್ಟ್ ಬಂದಿದ್ದು, ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಗಳಾದ ಡಿ.ರವಿಕುಮಾರ್ ರವರಿಗೆ ಪರಿಶೀಲನೆಗಾಗಿ ಕಳುಹಿಸಿದ್ದು, ಅವರು ಪರಿಶೀಲಿಸಿ ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿರಲ್ಲಿ ತೆಂಗು ಬೆಳೆ ಇದೆ ಎಂದು ದೃಢೀಕರಣ ಪತ್ರ ನೀಡುವಂತೆ ನೀಡಿರುವ ವರದಿಯ ಮೇಲೆ ಉಪತಹಶೀಲ್ದಾರ್ ರವರಿಗೆ ಶಿಫಾರಸ್ಸು ಮಾಡಿ ಕಳುಹಿಸಿರುತ್ತೇನೆ. ಇದರಲ್ಲಿ ನಾನು ಯಾವುದೇ ಆಮೇಶಕ್ಕೆ ಒಳಗಾಗಿರುವುದಿಲ್ಲ ಹಾಗೂ ಸರ್ಕಾರಕ್ಕೆ ಯಾವುದೇ ವಂಚನೆ ಮಾಡಿರುವುದಿಲ್ಲ. ಆದ್ದರಿಂದ, ತನ್ನನ್ನು ಪ್ರಕರಣದಿಂದ ಕೈಬಿಡಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ.

9. 5ನೇ ಎದುರುದಾರರು ಸಲ್ಲಿಸಿರುವ ಆಕ್ಷೇಪಣೆಯಲ್ಲಿ, ದೂರಿನಲ್ಲಿ ಆರೋಪಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಸಕಾಲ ಯೋಜನೆ ಅಡಿ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಗ್ರಾಮ ಲೆಕ್ಕಿಗರು ಹಾಗೂ ಕಂದಾಯ ನಿರೀಕ್ಷಕರ ವರದಿಯನ್ನು ಆಧರಿಸಿ ದೃಢೀಕರಣ ಪತ್ರಗಳನ್ನು ಉಪತಹಶೀಲ್ದಾರ್ ರವರು ನೀಡಬೇಕಾಗಿರುತ್ತದೆ. ಕಂದಾಯ ಅಧಿಕಾರಿಗಳು ವರದಿ ನೀಡಿದ ನಂತರವೂ ಉಪತಹಶೀಲ್ದಾರ್

ರವರು ಕಡ್ಡಾಯವಾಗಿ ಸ್ಥಳ ಪರಿಶೀಲಿಸಬೇಕೆಂಬ ನಿಯಮ ಇರುವುದಿಲ್ಲ. ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ಜಮೀನಿನ ಬೆಳೆ ದೃಢೀಕರಣ ಪತ್ರಕ್ಕೆ ಸಂಬಂಧಿಸಿದಂತೆ ಗ್ರಾಮ ಲೆಕ್ಕಾಧಿಕಾರಿ ಹಾಗೂ ಕಂದಾಯ ಅಧಿಕಾರಿ ರವರು ಪರಿಶೀಲಿಸಿ ಸಲ್ಲಿಸಿರುವ ವರದಿಗಳನ್ನು ಆಧರಿಸಿ ಬೆಳೆ ದೃಢೀಕರಣ ಪತ್ರವನ್ನು ನೀಡಿರುತ್ತೇನೆ. ನನ್ನ ಮೇಲಿನ ಆರೋಪ ಸತ್ಯಕ್ಕೆ ದೂರವಾಗಿದ್ದು, ಪ್ರಕರಣದಿಂದ ನನ್ನನ್ನು ಕೈಬಿಡಬೇಕೆಂದು ಮನವಿ ಮಾಡಿಕೊಂಡಿರುತ್ತಾರೆ.

10. ದೂರಿನ ಅಂಶಗಳು, ಎದುರುದಾರರ ಆಕ್ಷೇಪಣೆ ಹಾಗೂ ಅದರ ಜೊತೆ ಲಗತ್ತಿಸಿರುವ ದಾಖಲೆಗಳು, ತನಿಖಾಧಿಕಾರಿಗಳ ತನಿಖಾ ವರದಿ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ನೋಡಲಾಗಿ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಸಿ.ಎನ್.ಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟಂತೆ ಭೀಕರ ಬರಗಾಲದಿಂದ ತೆಂಗು ಬೆಳೆ ನಾಶವಾಗಿ ಸರ್ಕಾರ ತೆಂಗು ಪುನಶ್ಚೇತನ ಯೋಜನೆಯಡಿ 80 ಲಕ್ಷ ಅನುದಾನ ನೀಡಿದ್ದು, ಸದರಿ ಕಾಮಗಾರಿಗಳಲ್ಲಿ ಲಂಚ ನೀಡಿದ ಬಗ್ಗೆ ಮತ್ತು ಕಾಮಗಾರಿ ಪೂರ್ಣಗೊಳಿಸದವರಿಗೆ ಎದುರುದಾರರು ಹಣ ಮಂಜೂರು ಮಾಡಿರುತ್ತಾರೆ. ಬಡ ರೈತರು, ಪರಿಶಿಷ್ಟ ಜಾತಿ/ವರ್ಗದ ಜನರು ಅರ್ಜಿ ನೀಡಿದ್ದು, ಸೌಲಭ್ಯಕ್ಕೆ ಅರ್ಹರಿದ್ದರೂ ಸಹ ಸದರಿಯವರಿಗೆ ಸೌಲಭ್ಯ ನೀಡಿರುವುದಿಲ್ಲ ಎಂಬುದು ದೂರುದಾರರ ಆರೋಪವಾಗಿದೆ.

11. ಶ್ರೀ.ಕೆ.ಸುರೇಶ, ಪೋಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ತುಮಕೂರು ರವರು ದಿ:20-06-2017 ರಂದು ತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ತನಿಖಾ ವರದಿಯಲ್ಲಿ, ದೂರಿನಲ್ಲಿ ಆರೋಪಿಸಿರುವ ಆರೋಪಗಳಾದ 1) ತೆಂಗು ಪುನಶ್ಚೇತನ ಯೋಜನೆ ಅಡಿಯಲ್ಲಿ ಲಂಚದ ಹಣ ಕೊಟ್ಟವರಿಗೆ ಕಾಮಗಾರಿ ಪೂರ್ಣಗೊಳಿಸದವರಿಗೆ ಪರಿಹಾರ ಮಂಜೂರು ಮಾಡಿರುತ್ತಾರೆ ಎಂಬ ಆಪಾದನೆಗಳಿಗೆ ಯಾವುದೇ ಸಾಕ್ಷ್ಯ ದೊರಕಿರುವುದಿಲ್ಲ, 2) ಟ್ರ್ಯಾಕ್ಟರ್ ಖರೀದಿಯ ಸಹಾಯಧನವನ್ನು ಲಂಚದ ಹಣ ಕೊಟ್ಟವರಿಗೆ ಮಂಜೂರು ಮಾಡಿರುತ್ತಾರೆ ಎಂಬ ಆಪಾದನೆಯ ಬಗ್ಗೆ ವಿಚಾರಣೆ ಮಾಡಲಾಗಿ ಸಾಕ್ಷಿದಾರರಾದ ಶ್ರೀ.ಗಂಗಾಧರಮೂರ್ತಿ, ರಾಮಚಂದ್ರಯ್ಯ ಮತ್ತು ಎಸ್.ಜಿ.ರಂಗಯ್ಯ ರವರ ಮಗ ಚಿಕ್ಕಣ್ಣ ರವರ ಹೇಳಿಕೆಗಳಿಂದ ಆರೋಪ ಸುಳ್ಳಾಗಿರುವುದು ಕಂಡುಬರುತ್ತದೆ. 3) 2013-14 ಮತ್ತು 2014-15ನೇ ಸಾಲಿನಲ್ಲಿ ಪ್ರಕೃತಿ ವಿಕೋಪದಿಂದ ಬೆಳೆ ಹಾನಿ ಆಗಿರುವ ಕುರಿತು ಸರ್ಕಾರವು ಪರಿಹಾರದ ಹಣ 80 ಲಕ್ಷ ರೂ.ಗಳನ್ನು 1ನೇ ಎದುರುದಾರರಾದ ಶ್ರೀಮತಿ.ಮಹಾಲಕ್ಷ್ಮಮ್ಮ ರವರು

ಅವರ ಸ್ವಂತಕ್ಕೆ ಬಳಸಿಕೊಂಡಿರುತ್ತಾರೆ ಎಂಬ ಆರೋಪದ ಬಗ್ಗೆ ಯಾವುದೇ ಸಾಕ್ಷ್ಯಪುರಾವೆಗಳು, ದಾಖಲಾತಿಗಳು ಲಭ್ಯವಿರುವುದಿಲ್ಲ. 4) ತೋಟಗಾರಿಕೆಯಿಂದ ನೀಡುತ್ತಿರುವ ಸಹಾಯಧನ ಮತ್ತು ಸೌಲಭ್ಯಗಳನ್ನು ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಆರ್‌ಟಿಜಿಎಸ್ ಮುಖಾಂತರ ವರ್ಗಾಯಿಸಿರುವುದು ತನಿಖೆಯಲ್ಲಿ ಕಂಡುಬರುತ್ತದೆ ಎಂಬುದಾಗಿ ವರದಿ ಸಲ್ಲಿಸಿರುತ್ತಾರೆ.

12. ಮುಂದುವರೆದು, ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ರಲ್ಲಿ 4 ಎಕರೆ ಜಮೀನಿನಲ್ಲಿ ಯಾವುದೇ ಬೆಳೆ ಬೆಳೆಯದಿದ್ದರೂ 2015-16ನೇ ಸಾಲಿನಲ್ಲಿ ಆರ್.ಕೆ.ವಿ.ವೈ. ಯೋಜನೆ ಅಡಿ ಶ್ರೀಮತಿ.ರಂಗಮ್ಮ ಕೋಂ ಲೇಟ್ ರಂಗಯ್ಯ ರವರಿಗೆ 6,400/-ರೂ. ಬೆಳೆ ಪರಿಹಾರವನ್ನು 1 ರಿಂದ 5ನೇ ಎದುರುದಾರರು ಮಂಜೂರು ಮಾಡಿರುತ್ತಾರೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ತನಿಖೆ ಮಾಡಲಾಗಿ, ಅರ್ಜಿದಾರರಾದ ಶ್ರೀಮತಿ.ರಂಗಮ್ಮ ಕೋಂ ರಂಗಯ್ಯ ರವರ ಹೆಸರಿನಲ್ಲಿ ದೂರುದಾರರಾದ ಎಸ್.ಟಿ.ಗಿರಿಯಪ್ಪ ಹಾಗೂ ಶ್ರೀಮತಿ.ರಂಗಮ್ಮ ರವರ ಮೊಮ್ಮಗನಾದ ರಂಜನಕುಮಾರ್ ಹಾಗೂ ಆತನ ತಂದೆ ಪುಟ್ಟರಂಗಯ್ಯ ರವರು ಸೇರಿಕೊಂಡು ತೀರ್ಥಪುರ ಗ್ರಾಮದ ಸ.ನಂ.36ರ ಜಮೀನಿನಲ್ಲಿರುವ ತೆಂಗಿನ ಮರಗಳನ್ನು ತೋರಿಸಿ, ಫೋಟೋ ತೆಗೆಯಿಸಿ, ಕಂದಾಯ ಅಧಿಕಾರಿಗಳಿಗೆ ನೀಡಿರುವ ಮಾಹಿತಿಯ ಮೇಲೆ 3 ರಿಂದ 5ನೇ ಎದುರುದಾರರು ನೀಡಿರುವ ಸುಳ್ಳು ಬೆಳೆ ದೃಡೀಕರಣ ಪತ್ರದ ಆಧಾರದ ಮೇಲೆ ಹಾಗೂ 2ನೇ ಎದುರುದಾರರು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿರುತ್ತೇನೆ ಎಂದು ನೀಡಿರುವ ಪರಿವೀಕ್ಷಣಾ ವರದಿಯನ್ನು ಪರಿಶೀಲಿಸದೆ 5ನೇ ಎದುರುದಾರರು 6,400/-ರೂ.ಗಳ ಬೆಳೆ ಪರಿಹಾರದ ಧನವನ್ನು ಶ್ರೀಮತಿ.ರಂಗಮ್ಮ ಕೋಂ ರಂಗಯ್ಯ ರವರ ಖಾತೆಗೆ ಜಮಾ ಮಾಡುವ ಮೂಲಕ ಕರ್ತವ್ಯಲೋಪ ಎಸಗಿ, ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು ತನಿಖೆಯಿಂದ ದೃಢಪಟ್ಟಿರುತ್ತದೆ ಎಂದು ಅಭಿಪ್ರಾಯಪಟ್ಟಿರುತ್ತಾರೆ.

13. ಮೇಲ್ಕಂಡ ಸುಳ್ಳು ಬೆಳೆ ದೃಡೀಕರಣ ಪತ್ರ ನೀಡಿ, 6,400/-ರೂ.ಗಳ ಪರಿಹಾರ ಧನವನ್ನು ಮಂಜೂರು ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ 1 ರಿಂದ 5ನೇ ಎದುರುದಾರರ ಪಾತ್ರಗಳ ಕುರಿತು ಕಡತದಲ್ಲಿ ಲಭ್ಯವಿರುವ ದಾಖಲೆಗಳನ್ನು ಗಣನೆಗೆ ತೆಗೆದುಕೊಂಡಾಗ, ಮೊದಲಿಗೆ 3ನೇ ಎದುರುದಾರರಾದ ಶ್ರೀ.ಡಿ.ರವಿಕುಮಾರ್, ಗ್ರಾಮ ಲೆಕ್ಕಾಧಿಕಾರಿ, ಶಂಬೋನಹಳ್ಳಿ ರವರು ಸರಿಯಾಗಿ ಸ್ಥಳ ಪರಿಶೀಲಿಸದೆ, ಶ್ರೀಮತಿ.ರಂಗಮ್ಮ ರವರ ಮೊಮ್ಮಗ ರಂಜನ್ ಕುಮಾರ್ ರವರು ತೋರಿಸಿದ

ತೀರ್ಥಪುರ ಗ್ರಾಮದ ಸ.ನಂ.36ರ ಜಮೀನಿಗೆ ಹೋಗಿ ಸರಿಯಾಗಿ ತನಿಖೆ ಮಾಡದೆ, ಅಕ್ಕಪಕ್ಕದ ಮಾಲೀಕರನ್ನು ವಿಚಾರಿಸಿ ಪರಿಶೀಲಸದೆ, ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ಜಮೀನಿಗೆ ಸಂಬಂಧಪಟ್ಟಂತೆ ಮಾಹಿತಿ ಸರಿಯಿದೆ ಎಂದು ದಿನಾಂಕ:18-01-2016 ರಂದು ಬೆಳೆ ದೃಢೀಕರಣ ಪತ್ರ ನೀಡಬಹುದಾಗಿದೆ ಎಂದು ಕಂದಾಯ ಅಧಿಕಾರಿಗೆ ಶಿಫಾರಸ್ಸು ಮಾಡಿರುವುದು ಕಂಡುಬರುತ್ತದೆ. ಸದರಿ ಪ್ರಕರಣದಲ್ಲಿಯ ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ಜಮೀನಿಗೂ ಹಾಗೂ ತೀರ್ಥಪುರ ಗ್ರಾಮದ ಸ.ನಂ.36ರ ಜಮೀನಿನ ನಡುವೆ 6 ಕಿ.ಮೀ. ಅಂತರವಿದ್ದು, ಎರಡೂ ಬೇರೆ ಬೇರೆ ಗ್ರಾಮಗಳು ಆಗಿದ್ದರೂ ಸಹಾ, 3ನೇ ಎದುರುದಾರರು ಗ್ರಾಮ ಸಹಾಯಕರ ಜೊತೆ ಅರ್ಜಿಯಲ್ಲಿ ನಮೂದಿಸಿದ ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ಸರ್ವೆ ಜಮೀನಿಗೆ ಹೋಗಿ ಮಾಹಿತಿ ಸಂಗ್ರಹಿಸಿ, ಅಕ್ಕಪಕ್ಕದ ಮಾಲೀಕರು ಹಾಗೂ ಚಕ್‌ಬಂದಿನ ಬಗ್ಗೆ ವಿಚಾರಿಸದೆ ಹಾಗೂ ರಂಜನ್ ಕುಮಾರ್ ರವರು ನೀಡಿರುವ ಮಾಹಿತಿಯ ಸತ್ಯಾಂಶದ ಬಗ್ಗೆ ತನಿಖೆ ಮಾಡದೆ, ಸ.ನಂ.18/ಪಿ ಜಮೀನಿಗೆ ಹೋಗದೆ, ತೀರ್ಥಪುರ ಗ್ರಾಮದ ಸ.ನಂ.36ರ ಜಮೀನಿಗೆ ಹೋಗಿ ಮಾಹಿತಿ ಸರಿ ಇದೆ ಎಂದು ಬೆಳೆ ದೃಢೀಕರಣ ಪತ್ರ ನೀಡಬಹುದು ಎಂದು ದಿನಾಂಕ:18-01-2016 ರಂದು ಕಂದಾಯ ಅಧಿಕಾರಿಗಳಿಗೆ ಶಿಫಾರಸ್ಸು ಮಾಡುವ ಮೂಲಕ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

14. 2ನೇ ಎದುರುದಾರರಾದ ಶ್ರೀ.ರಂಗಸ್ವಾಮಿ, ಗುಮಾಸ್ತರು, ತೋಟಗಾರಿಕೆ ಇಲಾಖೆ ರವರು ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿರಲ್ಲಿ ತೆಂಗಿನ ಸಸಿಗಳು ಇಲ್ಲದಿದ್ದರೂ ಸಹಾ, ಖುದ್ದಾಗಿ ಸ್ಥಳ ಪರಿಶೀಲಿಸಿರುತ್ತೇನೆ ಎಂದು ನೀಡಿರುವ ಕ್ಷೇತ್ರ ಪರಿಶೀಲನಾ ವರದಿಯನ್ನು 1ನೇ ಎದುರುದಾರರಿಗೆ ನೀಡಿರುವುದು ಕಂಡುಬರುತ್ತದೆ. ತನಿಖಾಧಿಕಾರಿಗಳ ವರದಿಯ ಪ್ರಕಾರ ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿರಲ್ಲಿ ತೆಂಗು ಸಸಿಗಳು ಇರುವುದಿಲ್ಲ. ಅದು ಕೇವಲ ಕುರುಚಲು ಗಿಡಗಳು ಬೆಳೆದಿರುವ ಜಮೀನು ಆಗಿರುತ್ತದೆ ಎಂದು ತನಿಖಾ ವರದಿ ಸಲ್ಲಿಸಿರುವುದರಿಂದ, 2ನೇ ಎದುರುದಾರರು ಪ್ರಸ್ತಾಪಿತ ಜಮೀನಿಗೆ ಖುದ್ದಾಗಿ ಭೇಟಿ ನೀಡಿ, ಅಕ್ಕಪಕ್ಕದ ಜಮೀನಿನ ಮಾಲೀಕರನ್ನು ವಿಚಾರಿಸದೆ, ತೆಂಗಿನ ಸಸಿಗಳು ಇಲ್ಲದಿದ್ದರೂ ಸಹಾ, ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿರುತ್ತೇನೆ ಎಂದು ಸುಳ್ಳು ಕ್ಷೇತ್ರ ಪರಿಶೀಲನಾ ವರದಿಯನ್ನು ನೀಡುವ ಮೂಲಕ ಕರ್ತವ್ಯಲೋಪ ಎಸಗಿ, ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ.

15. ಪ್ರಸ್ತುತ ಪ್ರಕರಣದಲ್ಲಿ 3ನೇ ಎದುರುದಾರರು ಶಿಫಾರಸ್ಸು ಮಾಡಿರುವ ವರದಿಯ ಆಧಾರದ ಮೇಲೆ 4ನೇ ಎದುರುದಾರರು ವರದಿ ನೀಡಿದ್ದು, ಅದರ ಆಧಾರದ ಮೇಲೆ 5ನೇ ಎದುರುದಾರರು ಬೆಳೆ ದೃಢೀಕರಣ ಪತ್ರ ನೀಡಿರುತ್ತಾರೆ. ಅದೇ ರೀತಿ 2ನೇ ಎದುರುದಾರರು ನೀಡಿರುವ ಕ್ಷೇತ್ರ ಪರಿಶೀಲನಾ ವರದಿಯ ಆಧಾರದ ಮೇಲೆ 1ನೇ ಎದುರುದಾರರಾದ ಶ್ರೀಮತಿ.ಮಹಾಲಕ್ಷ್ಮಮ್ಮ, ಹಿರಿಯ ತೋಟಗಾರಿಕೆ ನಿರ್ದೇಶಕರು ರವರು ಶ್ರೀಮತಿ.ರಂಗಮ್ಮ ಕೋಂ ಲೇಟ್ ರಂಗಯ್ಯ ರವರ ಬ್ಯಾಂಕ್ ಖಾತೆಗೆ ಆರ್.ಟಿ.ಜಿ.ಎಸ್. ಮುಖಾಂತರ 6,400/-ರೂ.ಗಳ ಬೆಳೆ ಪರಿಹಾರದ ಧನವನ್ನು ಜಮಾ ಮಾಡಿರುವುದು ಕಂಡುಬರುತ್ತದೆ. 2 ಮತ್ತು 3ನೇ ಎದುರುದಾರರು ಸ್ಥಳ ಪರಿಶೀಲಿಸಿ ನೀಡಿರುವ ಪರಿಶೀಲನಾ ವರದಿಯ ಕುರಿತು ದೂರುದಾರರಾಗಲೀ ಅಥವಾ ಇತರೆ ಯಾವುದೇ ವ್ಯಕ್ತಿಗಳಾಗಲೀ ತಕರಾರು ಸಲ್ಲಿಸಿರುವುದಿಲ್ಲ ಹಾಗೂ 1, 4 ಮತ್ತು 5ನೇ ಎದುರುದಾರರ ಗಮನಕ್ಕೂ ತಂದಿರುವುದಿಲ್ಲ. ಹೀಗಾಗಿ 2 ಮತ್ತು 3ನೇ ಎದುರುದಾರರು ನೀಡಿರುವ ಸ್ಥಳ ಪರಿಶೀಲನಾ ವರದಿಯ ಆಧಾರದ ಮೇಲೆ 4 ಮತ್ತು 5ನೇ ಎದುರುದಾರರು ಬೆಳೆ ದೃಢೀಕರಣ ಪತ್ರವನ್ನು ನೀಡಿದ್ದು, ಅವುಗಳ ಆಧಾರದ ಮೇಲೆ 1ನೇ ಎದುರುದಾರರು ಬೆಳೆ ಪರಿಹಾರ ಧನ ಮಂಜೂರು ಮಾಡಿರುವುದರಿಂದ, 1, 4 ಮತ್ತು 5ನೇ ಎದುರುದಾರರ ವಿರುದ್ಧ ತನಿಖೆಯನ್ನು ಕೈಗೊಳ್ಳುವಂತಹ ಅಂಶಗಳು ಮೇಲ್ನೋಟಕ್ಕೆ ಕಂಡುಬರುವುದಿಲ್ಲ.

16. ಪ್ರಸ್ತುತ ಪ್ರಕರಣದಲ್ಲಿ ಶ್ರೀಮತಿ.ರಂಗಮ್ಮ ಕೋಂ ಲೇಟ್ ರಂಗಯ್ಯ ರವರು ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ವಿಸ್ತೀರ್ಣ 4 ಎಕರೆ ಜಮೀನಿನಲ್ಲಿ ತೆಂಗಿನ ತೋಟಗಳ ಮುನಶ್ಚೇತನ ಸೌಲಭ್ಯ ಪಡೆಯಲು ಬೆಳೆ ಪರಿಹಾರ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿಯಲ್ಲಿ ಅರ್ಜಿದಾರರಾದ ಶ್ರೀಮತಿ.ರಂಗಮ್ಮ ಕೋಂ ಲೇಟ್ ರಂಗಯ್ಯ ರವರು ಬೆಳೆ ಪರಿಹಾರ ಕೋರಿರುವ ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ವಿಸ್ತೀರ್ಣ 4 ಎಕರೆ ಜಮೀನು ಪಾಳು ಜಮೀನಾಗಿದ್ದು, ಯಾವುದೇ ತೆಂಗು ಬೆಳೆ ಇರುವುದಿಲ್ಲ ಎಂಬುದಾಗಿ ವರದಿ ಸಲ್ಲಿಸಿರುತ್ತಾರೆ. ತನಿಖಾಧಿಕಾರಿಗಳು ಸಲ್ಲಿಸಿರುವ ತನಿಖಾ ವರದಿಯ ಮೇಲೆ 1 ರಿಂದ 5ನೇ ಎದುರುದಾರರು ಆಕ್ಷೇಪಣೆ ಸಲ್ಲಿಸಿ, ತನಿಖಾ ವರದಿಯಲ್ಲಿನ ಅಂಶಗಳನ್ನು ನಿರಾಕರಿಸಬೇಕೆಂದು ಹಾಗೂ 3ನೇ ಎದುರುದಾರರು ಬೆಳೆ ದೃಢೀಕರಣ ಪತ್ರ ಕುರಿತು ನೀಡಿರುವ ಶಿಫಾರಸ್ಸು ವರದಿಯ ಮೇಲೆ 4ನೇ ಎದುರುದಾರರು ಶಿಫಾರಸ್ಸು ಮಾಡಿರುವುದಾಗಿ ಹಾಗೂ 3 ಮತ್ತು 4ನೇ ಎದುರುದಾರರ ಶಿಫಾರಸ್ಸಿನ ಮೇಲೆ 5ನೇ ಎದುರುದಾರರು ಬೆಳೆ ದೃಢೀಕರಣ ಪತ್ರ ನೀಡಿರುವುದಾಗಿ ಸಮರ್ಥಿಸಿಕೊಂಡಿರುತ್ತಾರೆ. ಆದರೆ, ಸದರಿ ಪ್ರಕರಣದಲ್ಲಿ 2

ಮತ್ತು 3ನೇ ಎದುರುದಾರರು ಹಾರೋಗೊಂಡನಹಳ್ಳಿ ಗ್ರಾಮದ ಸ.ನಂ.18/ಪಿ ವಿಸ್ತೀರ್ಣ 4 ಎಕರೆ ತೆಂಗು ಬೆಳೆ ಇಲ್ಲದ ಪಾಳು ಬಿದ್ದಿರುವ ಜಮೀನಿನಲ್ಲಿ ತೆಂಗಿನ ಸಸಿಗಳು ನಾಶವಾಗಿರುವ ಬಗ್ಗೆ ಸುಳ್ಳು ದೃಢೀಕರಣ ಪತ್ರ ನೀಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಸದರಿ ಪ್ರಕರಣದಲ್ಲಿ ತನಿಖಾಧಿಕಾರಿಗಳು ಸಲ್ಲಿಸಿರುವ ವರದಿಯನ್ನು ತಳ್ಳಿ ಹಾಕುವಂತಹ ಅಥವಾ ತಿರಸ್ಕರಿಸುವಂತಹ ಸಮಂಜಸವಾದ ದಾಖಲೆಗಳನ್ನಾಗಲೀ, ಸಾಕ್ಷ್ಯಮರಾವೆಗಳನ್ನಾಗಲೀ ಎದುರುದಾರರು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಸದರಿ ಪ್ರಕರಣದಲ್ಲಿ ಲಭ್ಯವಿರುವ ಎಲ್ಲಾ ದಾಖಲೆಗಳು ಹಾಗೂ ಸಾಕ್ಷ್ಯ ಮರಾವೆಗಳನ್ನು ಗಣನೆಗೆ ತೆಗೆದುಕೊಂಡಾಗ, 3ನೇ ಎದುರುದಾರರು ನೀಡಿರುವ ಸುಳ್ಳು ಸ್ಥಳ ಪರಿಶೀಲನಾ ವರದಿ ಹಾಗೂ 2ನೇ ಎದುರುದಾರರು ನೀಡಿರುವ ಸುಳ್ಳು ಕ್ಷೇತ್ರ ಪರಿವೀಕ್ಷಣಾ ವರದಿಗಳನ್ನು ನೀಡುವ ಮೂಲಕ ಕರ್ತವ್ಯಲೋಪ ಎಸಗಿ ಸರ್ಕಾರಕ್ಕೆ ಆರ್ಥಿಕ ನಷ್ಟ ಉಂಟು ಮಾಡಿರುವುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡುಬರುತ್ತದೆ ಹಾಗೂ 2 ಮತ್ತು 3ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸಾರ್ವಜನಿಕ/ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವರ್ತನೆ/ದುರ್ನಡತೆ ಮತ್ತು ಸರ್ಕಾರಿ ಹಣದ ದುರ್ಬಳಕೆ ಹಾಗೂ ಅಪರಾಧಿಕ ನಂಬಿಕೆ ದ್ರೋಹ ಎಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ. 1, 4 ಮತ್ತು 5ನೇ ಎದುರುದಾರರ ವಿರುದ್ಧ ತನಿಖೆಯನ್ನು ಕೈಗೊಳ್ಳುವಂತಹ ಅಂಶಗಳು ಮೇಲ್ನೋಟಕ್ಕೆ ಕಂಡುಬರದ ಕಾರಣ, ಸದರಿಯವರುಗಳನ್ನು ಪ್ರಕರಣದಿಂದ ಕೈಬಿಡಬಹುದಾಗಿದೆ.

17. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(ii) ಮತ್ತು (iii) ರನ್ವಯ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, **2ನೇ ಎದುರುದಾರರಾದ** ಶ್ರೀ ರಂಗಸ್ವಾಮಿ, ಗುಮಾಸ್ತರು, ತೋಟಗಾರಿಕೆ ಇಲಾಖೆ, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ(**ನಿವೃತ್ತಿ ದಿನಾಂಕ:30-06-2024**) ಹಾಗೂ **3ನೇ ಎದುರುದಾರರಾದ** ಶ್ರೀ ರವಿಕುಮಾರ್.ಡಿ ಬಿನ್ ದೊಡ್ಡಯ್ಯ, ಗ್ರಾಮ ಲೆಕ್ಕಾಧಿಕಾರಿ, ಶಂಬೋನಹಳ್ಳಿ, ಕೋರ ಹೋಬಳಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ, (**ನಿವೃತ್ತಿ ದಿನಾಂಕ: 31-07-2051**) ಇವರ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರ ಅಡಿಯಲ್ಲಿ

ಇಲಾಖಾ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

18. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

[ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ, ಬೆಂಗಳೂರು.